ಸ್ವಾಮಿ, ಆವಮ್ಮನ್ನ ನೋಡಿದ್ರೆ ಕಳ್ಳು ಬಕ್ಕಂಡ್ ಬಂದಂಗಾಗುತ್ತೆ. ಈಗೀಗ ಅವಳಿಗೆ ಏನೂ ಗೊತ್ತಾಗಲ್ಲಾ. ನನ್ನ ಮಗ, ನನ್ನ ಮಗ ಅಂತ ರಾತ್ರಿಹಗಲೆನ್ನದೆ ಕನವರಿಸ್ತಾಳೆ. ನೋಡಿ ಏನು ಮಾಡದು' ಎಂದು ನಿಂಗಣ್ಣನು ಮೌನವಾದ.

ಏನಾರು ಅವನ ಮಾತು ಕೇಳಿ 'ನಾನು ಇವನ್ನೆಲ್ಲಾ ನೋಡೋದ ಬಿಟ್ಟಿದ್ದೀನಿ, ಇದಕ್ಕೆಲ್ಲ ತುಮಕೂರಿಗೆ ಹೋಗಬೇಕು. ಅಲ್ಲಿಗೆ ಹೋದಾಗ ತಿಳಿತೀನಿ ಇರು' ಎಂದ. ಅಂಗೇ ಮಾತಾಡ್ತಾ ನಿಂತಿದ್ದಾಗ ಅತ್ತಿಂದ ಊರ ಹನುಮಂತರಾಯರಿಗೆ ಗಂಧದ ಕಡ್ಡಿ ಹಚ್ಚಲು ಬೆಂಕಿಕಡ್ಡಿ ತಗಣಕೆ ಬಂದವನ ಕಡೆಗೆ ಮಾತು ಮುಂದುವರೆಯಿತು. ನಿಂಗಣ್ಣನು ಸ್ವಲ್ಪ ಹೊತ್ತು ನಿಂತು ಕಾಯ್ದು 'ಅದೇನು ನೋಡಿ ಸ್ವಾಮಿ, ನಿಮ್ಮಿಂದ ಒಳ್ಳೇದಾಗ್ಲಿ' ಎನ್ನುತ್ತಾ ಇತ್ತ ಹೆಜ್ಜೆ ಹಾಕಿ ಆಕಾಶ ನೋಡುತ್ತ, 'ಸದ್ಯಕ್ಕೆ ಮಳೆ ಬರಂಗೆ ಕಾಣಲ್ಲ ಅಲ್ವಾ ಸ್ವಾಮಿ?' ಎಂದ ನಿಂಗಣ್ಣನ ಮಾತಿಗೆ, 'ಈಗ್ಯಾವ್ದೊ ಮಳೆ, ಸದ್ಯಕ್ಕೆ ಯಾವುದೂ ಇಲ್ಲ' ಅಂದುಕೊಂಡು ಏನೋರು ಮನೆಯೊಳಗೆ ಹೋದರು.

* * *

ಬಸಪ್ಪ ನೇಗಿಲು ಕೆತ್ತುತ್ತಿದ್ದ. ಅಲ್ಲಿಗೆ ವಿರಾಮವಾಗಿ ಊರಿನವರು ಒಬ್ಬೊಬ್ಬರಾಗಿ ಬಂದು ಸೇರಿದರು. ನಿಂಗಣ್ಣನೂ ಸೇರಿಕೊಂಡ. ನೇಗಿಲು ಕೆತ್ತುವುದನ್ನು ನೋಡುತ್ತಾ ನಿಂತವರು ಅವರೊಂದು ಇವರೊಂದು ಮಾತು ಆಡುತ್ತಾ, ಮಾತಿಗೆ ಮಾತು ಸೇರಿ, 'ಇದು ಸರಿಯಾದ ನೇಗಿಲಾಗುತ್ತೆ. ಒಳ್ಳೇ ಮರದ ತುಂಡು. ಯಾವ್ ಕಾಲಕ್ಕೂ ಜಗ್ಗಲ್ಲ. ಎಲ್ಲಿಂದ ತಂದಪ್ಪ?' ಅಂತ ಕೇಳುತ್ತಿರುವಾಗಲೇ ಅತ್ತಿಂದ ಶಂಕ್ರನೂ ಬಂದು ನಿಂತನು. ನೆಲದಲ್ಲಿದ್ದ ಕುಳ ಕೈಯಲ್ಲಿ ಎತ್ತಿ ಹಿಡಿದು, 'ಅಬ್ಬಬ್ಬಬ್ಬ ಇಂಥಾ ಕುಳ. ಎಲ್ಲಿ ತಟ್ಟಿಸಿದ್ರಿ? ಒಳ್ಳೇ ಆಚಾರಿ' ಅಂತ ಒಬ್ಬೊರಿಗೊಬ್ಬರು ಮಾತನಾಡುತ್ತಾ ಕುಳವನ್ನು ಕೈಕೈಗೆ ದಾಟಿಸುತ್ತಾ ಹೋದಂತೆ ಅದು ಎಲ್ಲರ ಆಕರ್ಷಣೆಯಾಯಿತು.

ಆ ಕಟ್ಟೆ ಏರಿಕಡೆಯಿಂದ ಗೊಲ್ಲರ ಕಾಟಣ್ಣ ಬಂದೋನು 'ಯಾವಾರ ಕೊಡೋವು ನಿಮ್ಮಟ್ಟೀಲಿ ಮರಿ ಇದ್ದವಾ?' ಅಂತ ಕೇಳುತ್ತಾ ನೇಗಿಲು ಕೆತ್ತುವ ಗುಂಪಿನ ಕಡೆ ಬಂದು ನಿಂತ. ನಿಂಗಣ್ಣನನ್ನು ಕಂಡು 'ಲೋ ನಿಂಗಣ್ಣ ಒಂದು ಕಡ್ಡಿನೂ, ಬೀಡಿನೂ ಕೊಡೋ' ಎಂದು ಗೊಲ್ಲರ ಕಾಟಣ್ಣ ಕೇಳಿದ. ನಿಂಗಣ್ಣನು ಅವನಿಗೆ ಬೀಡಿ ಕಡ್ಡಿಯನ್ನು ಕೊಡುತ್ತಾ 'ನೀವೇಳ್ರೋ ಗೊಲ್ರು, ಗೊಲ್ ಮಾಯವ್ರೋ ಎಲ್ ಮಾಯವ್ರೋ' ಅಂದು ನಕ್ಕವನು, 'ನಿಂತವ ಬೀಡಿ, ಕಡ್ಡಿ ಎರಡೂ ಇಲ್ಲ. ಚಟ ಮಾತ್ರ ಐತೆ. ನಾನು ನಿಮ್ಮಂಗಿದ್ದಿದ್ರೆ, ಒಂದು ಬೀಡೇನು ಕೇಳ್ದವರಿಗೆ ಕಟ್ ಕಟ್ಲೇ ಕೊಡ್ತಿದ್ದೆ' ಎಂದು ತಮಾಷೆ ಮಾಡುತ್ತಾ ಬೀಡಿ ಕೊಟ್ಟು ಹಂಗಿಸಿದ. ನಿಂಗಣ್ಣನ ಮಾತಿಗೆ ಕಾಟಣ್ಣನು 'ನೀನೂ ಬಾರ್ಲಾ ನಮ್ಮಂಗೆ ಸಾವ್ಕಾರಾಗು. ಆಡು ಕುರಿ ಕಾಯಿ ಗೊತ್ತಾಗುತ್ತೆ ಸಾವ್ಕಾರ್ಕೆ' ಅಂದನು. ಅವನ ಮಾತಿಗೆ ನಿಂಗಣ್ಣನು 'ಬೇಕಲ್ಲಾ ಆಡು ಕುರಿ ತರಕೆ ಕೈಯಲ್ಲಿ ಕಾಸು' ಅಂತ ಅಂದನು. ನಿಂಗಣ್ಣನ ಮಾತಿಗೆ ಈ ಕಾಟಣ್ಣ 'ಅದಕ್ಯಾಕೋ ಕಾಸು... ನಮ್ಮವೇ ಹತ್ತು ರಾಸು ಮರ್ಪಾಲಿಗೆ ಕೊಟ್ಟೇನು, ಐತೇನೋ ಕಾಯೋಕೆ ದಮ್ಮು' ಎಂದು ಬೀಡಿ ಹಚ್ಚಿ ಹೊಗೆ ಬಿಟ್ಟ.

ಈ ಮಾತ ಕೇಳಿದ ನಿಂಗಣ್ಣನಿಗೆ ಈ ಕಳ್ಳನ, ಸುಳ್ಳನ, ಈ ಊರು ಎಲ್ಲಾ ರೋಸಿಹೋಗಿ ಮರಿಯಾಕಿದ್ರೆ ಎರಡು ಮೂರಾಗಿ ಮೂರು ಹತ್ತಾಗಿ... ಅನ್ನುತ್ತಾ ಅನ್ನುತ್ತಾ ನಿಂಗಣ್ಣನ ಕಣ್ಣುಗಳು ಬೆಳೆದ ಹೊಲಗಳತ್ತ ಸರಿದು ಅದರ ದೂರ ದಿಗಂತವ ಅಳೆಯುತ್ತಾ, ಅಲ್ಲೆಲ್ಲೋ ಕುರಿ ಕಾಯುತ್ತಾ ಕುಂತವರ ಕಂಡವನಂತೆ ಮೌನವಾದನು. ಅವನು ಮೌನವಾದುದನ್ನು ಕಂಡ ಕಾಟಣ್ಣ 'ಯಾಕೋ ನಿಂಗ ಸುಮ್ಮನಾದೆ' ಎಂದು ಎಚ್ಚರಿಸಿದ. 'ಕಾಯ್ತೀಯ ನೋಡು' ಎಂದು ಮತ್ತೆ ಕೇಳಿದಾಗ ಮೌನ ಮುರಿದ ನಿಂಗಣ್ಣನು, ಕಾಟಣ್ಣನ ಮಾತಿಗೆ ಸಾಕ್ಷಿ ಎಂಬಂತೆ ಶಂಕರನನ್ನು ಇಟ್ಟುಕೊಂಡು ಒಪ್ಪಿದನು. ಮರಿಗಳನ್ನು ಪಡೆದು ಮೇಯಿಸುವುದನ್ನು ಅಭ್ಯಾಸ ಮಾಡಿಕೊಂಡ. ಒಂದು ಎರಡಾಗಿ, ಎರಡು ನಾಲ್ಕಾಗಿ ಬೆಳೆಯತೊಡಗಿದವು. ಈಗ ಭೂಮಿಯ ಕೊನೆಯ ಅಂಚಿನವರೆಗೂ ಹಸಿರು ಹುಲ್ಲಿಗಾಗಿ ಓಡಾಡುತ್ತಾನೆ.

ಈಗ ನಿಂಗಣ್ಣ ರಾಸು ಮೇಯಿಸಲು ಗಿಡ ಮರಗಳಿಂದ ಹಾಸುಹೊಕ್ಕಾಗಿದ್ದ ಹಸಿರ ವನಸಿರಿಯ ನಡುವೆ ಮೇವಿಗಾಗಿ ಜನ ತಿರುಗಾಡಲೆಂದೇ ಮಾಡಿಕೊಂಡಿದ್ದ ಕಾಲುದಾರಿಯಲ್ಲಿ ರಾಸು ಹೊಡೆದುಕೊಂಡು ಹೋಗಬೇಕಾದ್ರೆ 'ಏನು ನಿಂಗ, ಆ ಹಿಂದ್ಗೋಗ್ತಿರ ಮರೀನ ಹಬ್ಬಕ್ಕೆ ಮಾಡನ? ಹಿಡ್ಕಳ್ಲಾ?' ಅಂತ ಆ ರಾಸೊಳಗೆ ಎದ್ದು ಕಾಣ್ತಿದ್ದ, ಹುಯ್ಯೋ ಹಾಲು ಕೊಟ್ಟು ಬೆಳೆಸಿದ್ದ ವಾತನನ್ನ ಸೀತಾನಾಯಕ ತೋರಿಸಿದ. 'ಅಯ್ಯೋ ಶಿವನೆ... ಅದ್ನ ಲಕ್ಷಾ ಕೊಟ್ರೂ ಕೊಟ್ಟೇನ' ಎನ್ನುತ್ತ ಕೇಳಿದವನನ್ನ ಮನಸೊಳಗೆ ಬೈಯ್ಕಂಡು ಅದನ್ನೊಂದ್ಸಾರಿ ತಬ್ಕಂಡು 'ನಮ್ಮ ತಲೆ ಕಾಯದು ಇದೇ' ಅಂತ ಸೊಪ್ಪು ಕುಯ್ಯುವ ಗಳ ಹೆಗಲಿಗೇರಿಸಿಕೊಂಡು ಕುಂಟುತ್ತಾ ಕುಂಟುತ್ತಾ ಅಲ್ಲಿ ಕಾಣುವ ಹಸಿರು ಗುಡ್ಡದೊಳಗೆ ಸೇರಿ ಮರೆಯಾದನು.

ಅವತ್ತು ರಾಸು ತರಲು ಹೋದಾಗ ಹಾಲು ಸಾಕಾಗಲ್ಲ ಅಂತ ಒಂದು ಮರಿಯನ್ನು ಕೈ ಎತ್ತಿ ಕಾಟಣ್ಣ ನಿಂಗಣ್ಣನಿಗೆ ಕಾಸು ಕರಿಮಣಿ ಇಲ್ಲದೆ ಕೊಟ್ಟಿದ್ದ, 'ಹಾಲುಯ್ದು ಸಾಕು' ಅಂತ. ಹುಯ್ಯೋ ಹಾಲಿನಿಂದ ಬೆಳೆದ ಆ ಮೇಕೆ ಮರಿ ಈಗ ಎದೆ ಮಟ್ಟ ಬೆಳೆದಿದೆ. ಅದೇ ಈ ಮಂದೆಯನ್ನೆಲ್ಲಾ ಕಾಯುತ್ತೆ. ಒಂದು ಶಿಳ್ಳೆ ಹಾಕಿದರೆ ಎಲ್ಲಾ ಮೇಕೆಗಳನ್ನೂ ಕರೆದು ತರುತ್ತೆ. ಈಗ ನಿಂಗಣ್ಣನ ಮನೆಯಲ್ಲಿ ಒಂದು ದೊಡ್ಡ ಮಂದೆಯೇ ಇದೆ. ಖರ್ಚಿಗಾಗಿ ಸಾಕೋ ಮರಿ ಮಾರುತ್ತಾನೆ. ಅಂಗಡಿ ಶಿವಣ್ಣ ಎಷ್ಟು ಸಾಲ ಬೇಕಾದರೂ ಈಗ ಕೊಡುತ್ತಾನೆ. ಗಂಡ ಹೆಂಡತಿ ಇಬ್ಬರೂ ಈಗ ಆಡು ಕಾಯ್ತಾರೆ.

ಆಡು ಕಟ್ಟುವ ಮನೆಗಾಗಿ ಚುಂಚು ಬಾಗಿಸಿ ಅಲ್ಲೇ ಒಂದು ಒಪ್ಪಾರು ಮಾಡಿಕೊಂಡ. ಈಗ ಆಡಿನ ಗೊಬ್ಬರಕ್ಕೆ ಊರಿನ ಲಿಂಗಾಯಿತರು ಹಾತೊರೆಯುತ್ತಾರೆ. ಆಡು ತಂದಾಗ ಈ ನಿಂಗ ಕಾಲೆಳಕೊಂಡು, ಎಲ್ಲಿ ಆಡು ಕಾಯ್ತಾನೆ, ಬೀಡಿಗೋ, ತಿಂಡಿಗೋ ಮಾರಿ ಕೈಚೆಲ್ಲುತ್ತಾನೆ. ರಾಸುಕೊಟ್ಟ ಗೊಲ್ಲರ ಕಾಟಣ್ಣನ ಕತೆ ಅಷ್ಟೇ ಎಂದು ಇದೇ ಬಾವಿ ಹತ್ತಿರ ನಿಂತು ಗುಂಪು ಸೇರಿ ಮಾತಾಡಿದ್ದರು. ಈಗ ಊರವರು ದಾರಿ ತಪ್ಪಿದವರಿಗೆ 'ಲೋ ಆ ಚೊಟ್ಟ ನಿಂಗಣ್ಣನ್ನ ನೋಡಿ ಕಲೀರ್ಲ' ಅಂತ ಹೇಳ್ತಾರೆ.

* * *

ಊರೊಳಗೆ ಆಂಬುಲೆನ್ಸು ಸೈರನ್ನು ಹೊಡೆದುಕೊಳ್ಳುತ್ತ ಓಡಿ ಬಂತು. ಐಕ್ಳು ಮಕ್ಳು ಹಾರಿದವು. ಜಗಲಿಯಲ್ಲಿ ಕುಂತ ನಂಜಣ್ಣ 'ಏನುರ್ಲ ಪಾಪ ಅದು' ಅಂತ ಕೂಗು ಹಾಕಿದ. ಅವನ ಹೆಂಡತಿ ಹಿತ್ತಲ್ಲಿದ್ದವಳು, ಪೂಜಾರ್ರ ರಾಮಕ್ಕನ್ನ ಕೂಗಿ ಅದೇನೆಂದು ವಿಚಾರಿಸಿ ಇತ್ತ ಜಗಲಿಗೆ ಬಂದಳು. 'ಅಯ್ಯೋ ಅದೇನಂಗೆ ಒಂದೇ ಉಸಿರಿಗೆ ಅಂಗಾಡ್ತೀಯ? ಯಾರನ್ನಾದರೂ ಕೇಳಿ ತಿಳ್ಕಂಡು ಬರಬಾರದ' ಅಂತ ರೇಗಿ, 'ಆ ಮಲ್ಲಣ್ಣನ ಕರ್ಕಂಡು ಬಂದ್ರಂತೆ' ಅಂದಳು. ಊರ ಬೀದಿ ನಾಯಿಗಳು ಆ ಆಂಬುಲೆನ್ಸ್ ಶಬ್ದಕ್ಕೆ ಹೆದರಿ ದಿಕ್ಕಾಪಾಲಾಗಿ ಓಡಿ ಹೋಗಿ ಅತ್ತೊಂದು, ಇತ್ತೊಂದು ಅದೆಲ್ಲೆಲ್ಲೋ ನಿಂತು ಬೊಗಳುತ್ತಿದ್ದವು.

ನಂಜಣ್ಣನಿಗೂ ಮಲ್ಲನನ್ನು ಕರೆದುಕೊಂಡು ಬಂದಿರುವ ಸುದ್ದಿ ತಿಳಿದು ಜಗಲಿಯಲ್ಲಿ ಕೂರಲು ಜೀವ ತಡೆಯಲಿಲ್ಲ. ಅವನಿಗೂ ಇತ್ತೀಚೆಗೆ ಕುಂತಲ್ಲಿಂದ ಮೇಲೇಳಲು ಆಗುತ್ತಿರಲಿಲ್ಲ. ಅಕ್ಕಪಕ್ಕದವರು ಆಚೆ ಬೀದಿಯವರು ಹೋಗಿ ಬಂದು ಮಾಡುತ್ತಿದ್ದಾರೆ. ಕುಂತಲ್ಲಿಯೇ ಎದೆ ಭಾರ ಆದಂತೆ ಮಲ್ಲಣ್ಣನನ್ನು ಹೋಗಿ ನೋಡಲಾರದೆ ಸಂಕಟ ಅನುಭವಿಸುತ್ತಿದ್ದ. ಈ ಆಂಬುಲೆನ್ಸ್ ಹೋದ ಹಿಂದೆಯೇ ಗವಿರಂಗಣ್ಣ ಮಲ್ಲಣ್ಣನನ್ನು ನೋಡಲು ಹೋಗುತ್ತಿದ್ದರು.

ಆಗಲೇ ಈ ಗವಿರಂಗಣ್ಣ ಎಲ್ಲಾ ತಿಳಿದಿದ್ದರಿಂದ ಅವರು ಹೋಗುವ ದಾರಿಯಲ್ಲಿ ಸಿಕ್ಕಿದವರಿಗೆ, ಕೇಳಿದವರಿಗೆ 'ಅಯ್ಯೋ... ಎಲ್ಲೂ ಉಷಾರಾಗಲ್ಲ ಅಂತ ವಾಪಸ್ಸು ಕರ್ಕಂಡು ಬಂದವರೆ. ಬೆಂಗಳೂರಿನ ಆಸ್ಪತ್ರೆಯಲ್ಲಿದ್ದಾಗ ಪಕ್ಕದ ಬೆಡ್ಡಿನಲ್ಲಿದ್ದ ಅದ್ಯಾರೋ ಕೇರಳದಲ್ಲಿ ಆಯುರ್ವೇದಕ್ಕೆ ತೋರಿಸಲು ಹೇಳಿದ್ರಂತೆ, ಅಲ್ಲೂ ಆಗದೆ ಊರಿಗೆ ವಾಪಸ್ಸು ಕರ್ಕಂಡು ಬಂದವರೆ' ಎಂದು ಹೇಳತೊಡಗಿದ.

ಅಲ್ಲೇ ನಿಂತು ಎಲ್ಲವನ್ನೂ ಕೇಳಿಸಿಕೊಂಡ ರಾಮಕ್ಕ 'ಅಣ, ಮುಂದೇನು' ಎಂದಳು. ಅದನ್ನು ಕೇಳಿಸಿಕೊಂಡ ರಾಮಕ್ಕನ ಗಂಡ ಬಸಪ್ಪ, ಗವಿರಂಗಣ್ಣ ಹೇಳೋಕೂ ಮುಂಚೆಯೇ 'ಮುಂದೇನು ಅಂದರೆ, ಬದುಕಿರೋಗಂಟ ನೋಡ್ಕಳದು ಅಷ್ಟೇ' ಅಂದನು. ಗವಿರಂಗಣ್ಣ 'ಮಲ್ಲನ ಮನೆ ತಕ್ಕೋಗಿ ಬತ್ತಿನಿ' ಅಂದು ಅತ್ತ ಹೆಜ್ಜೆ ಹಾಕಿದ.

ಊರೊಳಗೆ ಗವಿರಂಗಣ್ಣ ಆತುರಾತುರವಾಗಿ ಹೋಗುತ್ತಿರುವುದ ಜಗಲಿಯಲ್ಲಿ ಕುಂತು ಗಮನಿಸಿದ ನಂಜಣ್ಣ 'ಅಣ, ಅಣ್ಣಾರೇ' ಎಂದು ಕೂಗಿದ. ಆ ದನಿಗೆ ತಿರುಗಿ ನೋಡಿದ ಗವಿರಂಗಣ್ಣ ಒಂದು ಸಾರಿ ನಂಜಣ್ಣನನ್ನು ಕಂಡು ದಂಗಾಗಿ 'ಅಯ್ಯೋ ಏನಾಯ್ತೋ, ಇಷ್ಟು ಮೆತ್ತಗಾಗಿದ್ದೀಯಾ? ಏನು ಉಷಾರಿರಲಿಲ್ವಾ?' ಅಂದ. ಗವಿರಂಗಣ್ಣನ ಮಾತಿಗೆ 'ಅಯ್ಯೋ ನಿಮಗೆ ಊರಲ್ಲಿ ಯಾರೂ ಹೇಳಿಲ್ಲಾ ಅಂತ ಕಾಣುತ್ತೆ' ಎಂದು ನಂಜಣ್ಣ